# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

**ಸಿ ಸಿ ನಂ:308/2018**

**ಚಾಸಾ-4/ಪ್ರಾಸಾ-1**

**ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕ:28.06.2024.**

| | | |
|---|---|---|
| ಹೆಸರು | : | ಸಮೀರ್ ಅಹಮ್ಮದ್ ತಂದೆ ರೆಹಮಾನ್ ಸಾಬ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ರಾಜಸ್ವ ನಿರೀಕ್ಷಕರು, ಹರಿಹರ |
| ವಿಳಾಸ | : | ಹರಿಹರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:**

ನಾನು ಜಗಳೂರಿನ ಬಿಸ್ತುವಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಸನ್ 2007 ರಿಂದ 2019 ರವರೆಗೆ ಕೆಲಸ ಮಾಡಿರುತ್ತೇನೆ. ಈಗ ನೋಡುತ್ತಿರುವ ಸ್ಥಳ ಪಂಚನಾಮೆಯಲ್ಲಿ ಇರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಸ್ಥಳ ಪಂಚನಾಮೆ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ದಿ:29.07.2017 ರಂದು ಬಿದರಕೆರೆಯ ಬಸವರಾಜಪ್ಪರವರ ಮನೆಯಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಪೋಲಿಸರು ಬಸವರಾಜಪ್ಪರವರ ಮನೆಯಲ್ಲಿ ಕಳ್ಳತನವಾದ ಬಗ್ಗೆ ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಸ್ಥಳವನ್ನು ತಾವು ಕಳ್ಳತನ ಮಾಡಿರುವ ಬಗ್ಗೆ ಆರೋಪಿಗಳು ಸ್ಥಳವನ್ನು ತೋರಿಸಿರುತ್ತಾರೆ. ನ್ಯಾಯಾಲಯದಲ್ಲಿ ಇದ್ದ ಆರೋಪಿ ನಂ:1 ಮತ್ತು 2 ರವರು ಹಾಜರು ಇದ್ದು ನೋಡಿ ಗುರುತಿಸಿರುತ್ತಾರೆ. ಆರೋಪಿ ನಂ.3 ಗೈರು ಹಾಜರು ಇದ್ದು, ಆರೋಪಿಯ ಗುರುತಿಗೆ ಅವರ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಈಗ ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಎರಡು ಪೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಸದರಿ ಪೋಟೋಗಳಲ್ಲಿ ಕಾಣುವ ಮನೆಯೂ ಬಸವರಾಜಪ್ಪರವರ ಮನೆಯಾಗಿರುತ್ತದೆ ಎಂದು ಗುರುತಿಸಿದ್ದು,

ಅವುಗಳನ್ನು ಕ್ರಮವಾಗಿ ನಿಪಿ2  ಮತ್ತು 3 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪೋಲಿಸರು ಮಹಜರ್ ನಡೆಸುವ ಸಂದರ್ಭದಲ್ಲಿ ತೆಗೆದಿರುತ್ತಾರೆ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಮುಂದುವರಿದ ಮುಖ್ಯ ವಿಚಾರಣೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ  ಕೇ ಸರಿ ಇದೆ

ಪ್ರ.ದ.ನ್ಯಾ.ದಂ., ಜಗಳೂರು